# ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ

## "ರಾಜ್ಯ ಬಂಜಾರಾ ರೈತರ ಕ್ಷೇಮಾಭಿವೃದ್ಧಿಯತ್ತ ಒಂದು ದಿಟ್ಟ ಹೆಜ್ಜೆ"

### ಹಿನ್ನಲೆ

ಕರ್ನಾಟಕ ಕೃಷಿ ಪ್ರಧಾನ ರಾಜ್ಯವಾಗಿದ್ದು, ಬಹುಪಾಲು ರೈತರು ಸಣ್ಣ ಮತ್ತು ಅತೀಸಣ್ಣ ಹಿಡುವಳಿದಾರರಾಗಿದ್ದಾರೆ. ಈ ರೈತರ ಭೂಹಿಡುವಳಿಯ ಗಾತ್ರವು ಕಡಿಮೆಯಿರುವುದರಿಂದ ಆಧುನಿಕ ತಂತ್ರಜ್ಞಾನ ಅಳವಡಿಕೆ, ಗುಣಮಟ್ಟದ ಪರಿಕರಗಳ ಖರೀದಿ ಮತ್ತು ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ಪಡೆಯುವಲ್ಲಿ ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಭಾರತ ಸರ್ಕಾರವು 2013ರಲ್ಲಿ 1956ರ ಕಂಪನಿ ಕಾಯ್ದೆಯ ವಿಭಾಗ IX A ರಲ್ಲಿ ತಿದ್ದುಪಡಿ ತಂದು ಕಂಪನಿ ಕಾಯ್ದೆಯಡಿಯಲ್ಲಿ ರೈತ ಉತ್ಪಾದಕರ ಸಂಸ್ಥೆಗಳನ್ನು ನೊಂದಾಯಿಸಲು ಅವಕಾಶ ನೀಡಲಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವೂ ಸಹ, ರೈತರ ಏಳಿಗೆಗಾಗಿ ರೈತ ಉತ್ಪಾದಕರ ಸಂಸ್ಥೆಗಳನ್ನು ಉತ್ತೇಜಿಸಲು 2018 ರಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ನೀತಿಯನ್ನು ರೂಪಿಸಿ ವಿವಿಧ ಅಭಿವೃದ್ಧಿ ಇಲಾಖೆಗಳ ಮುಖಾಂತರ ರೈತ ಉತ್ಪಾದಕರ ಸಂಸ್ಥೆಗಳನ್ನು ಉತ್ತೇಜಿಸುತ್ತಿದೆ. ಕರ್ನಾಟಕ ಸರ್ಕಾರ ಸಣ್ಣ ಮತ್ತು ಅತೀಸಣ್ಣ ರೈತರನ್ನು ಒಟ್ಟುಗೂಡಿಸಿ ಅವರ ಉತ್ಪಾದನೆ ಹಾಗೂ ಮಾರುಕಟ್ಟೆ ಸಾಮರ್ಥ್ಯವನ್ನು ವೃದ್ಧಿಸಲು ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸುವುದು ಹೆಚ್ಚು ಸೂಕ್ತವೆಂದು ಪರಿಗಣಿಸಿ ವಿವಿಧ ಇಲಾಖೆಗಳ ಸಹಯೋಗದಲ್ಲಿ ಸುಮಾರು 500 ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿದ್ದು ಅವು ವಿವಿಧ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ರೈತ ಉತ್ಪಾದಕರ ಸಂಸ್ಥೆಗಳಿಂದ ರೈತರಿಗಾಗುವ ಲಾಭಗಳನ್ನು ಮನಗಂಡು ಕರ್ನಾಟಕ ರಾಜ್ಯ ತಾಂಡಾ ಅಭಿವೃದ್ಧಿ ನಿಗಮ, ಬಂಜಾರಾ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿ ಬಲಪಡಿಸುವ ಯೋಜನೆಯನ್ನು ರೂಪಿಸಿದೆ. ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಅಭಿವೃದ್ಧಿಗೆ ಅಗತ್ಯ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಲು ಉದ್ದೇಶಿಸಿದೆ.



ರೈತ ಉತ್ಪಾದಕರ ಸಂಸ್ಥೆಯು ಪ್ರಾಥಮಿಕ ಉತ್ಪಾದಕರ ಸದಸ್ಯತ್ವ ಹೊಂದಿದ ಸಂಸ್ಥೆಯಾಗಿದ್ದು, ಕಂಪನಿ ಕಾಯ್ದೆ 1956 ರ ಅಥವಾ ಕರ್ನಾಟಕ ಸಹಕಾರಿ ಕಾಯ್ದೆ 1959ರ ಅಡಿಯಲ್ಲಿ ನೊಂದಾಯಿಸಬಹುದಾಗಿದೆ. ರೈತ ಉತ್ಪಾದಕರ ಸಂಸ್ಥೆಯು ಸ್ವಯಂ–ಸಹಾಯ, ಸ್ವಯಂ–ಜವಾಬ್ದಾರಿ, ಪ್ರಜಾಪ್ರಭುತ್ವ, ಸಮಾನತೆ, ಪಾರದರ್ಶಕತೆ, ವ್ಯವಹಾರ ಮತ್ತು ಸಹಕಾರಿ ತತ್ವಗಳ ಆಧಾರದ ಮೇಲೆ ರಚಿತವಾದ ರೈತರ ಮಾಲೀಕತ್ವದ ಕಾನೂನಾತ್ಮಕ ಸಂಸ್ಥೆಯಾಗಿರುತ್ತದೆ. ಇದರ ಮುಖ್ಯ ಉದ್ದೇಶವು, ಕೃಷಿ ಹಾಗೂ ಸಂಬಂಧಿಸಿದ ಚಟುವಟಿಕೆಗಳಲ್ಲಿ ಪಾಲ್ಗೊಂಡ ಸದಸ್ಯ ರೈತರಿಗೆ ತಾಂತ್ರಿಕ ಸಲಹೆ, ಸಾಮರ್ಥ್ಯ ಬಲವರ್ಧನೆ, ಉತ್ತಮ ಗುಣಮಟ್ಟದ ಪರಿಕರಗಳನ್ನು ಪೂರೈಸುವುದು, ಬೆಳೆದ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮುಖಾಂತರ ನೇರ ಮಾರುಕಟ್ಟೆ ಕಲ್ಪಿಸಿ ಸದಸ್ಯ ರೈತರನ್ನು ಹೆಚ್ಚು ಸಬಲರನ್ನಾಗಿ ಮಾಡುವುದು ಮತ್ತು ರೈತರ ಆರ್ಥಿಕ ಮಟ್ಟವನ್ನು ಬಲಪಡಿಸುವುದಾಗಿದೆ.

## ಬಂಜಾರಾ ರೈತ ಉತ್ಪಾದಕರ ಸಂಸ್ಥೆಗಳ ಉದ್ದೇಶಗಳು





1. ಬಂಜಾರಾ ರೈತರನ್ನು ಉತ್ಪಾದಕ ಸಂಸ್ಥೆಗಳ ಅಡಿಯಲ್ಲಿ ಸಂಘಟಿಸುವುದು ಮತ್ತು ರೈತರ ಸಾಮರ್ಥ್ಯವನ್ನು ಹೆಚ್ಚಿಸಲು ತರಬೇತಿ ನೀಡುವುದು
2. ಉತ್ಪಾದನೆ, ಕೊಯ್ಲೋತ್ತರ ಚಟುವಟಿಕೆ, ಖರೀದಿ, ಶ್ರೇಣೀಕರಣ, ಸಂಸ್ಕರಣೆ, ಕ್ರೋಢೀಕರಣ, ಮಾರಾಟ, ರಫ್ತು ಮತ್ತು ಆಮದು ಚಟುವಟಿಗಳನ್ನು ಕೈಗೊಂಡು ಸದಸ್ಯ ರೈತರ ಆದಾಯವನ್ನು ವೃದ್ಧಿಸುವುದು
3. ಬಂಜಾರಾ ರೈತರು ಬೆಳೆದ ಉತ್ಪನ್ನಗಳ ಮೌಲ್ಯವರ್ಧನೆ ಮಾಡುವುದು ಹಾಗೂ ಲಾಭದಾಯಕ ಮಾರುಕಟ್ಟೆಗಳನ್ನು ಕಂಡುಕೊಳ್ಳುವುದು
4. ಉತ್ಪನ್ನಗಳ ಮೌಲ್ಯಸರಪಳಿಯ ವಿವಿಧ ಹಂತಗಳನ್ನು ಗುರುತಿಸಿ, ಭಾಗವಹಿಸುವುದರ ಮುಖಾಂತರ ರೈತರ ಲಾಭಾಂಶವನ್ನು ಹೆಚ್ಚಿಸುವುದು
5. ಪರಿಕರಗಳ (ಬಿತ್ತನೆ ಬೀಜ, ಗೊಬ್ಬರ, ಕೀಟನಾಶಕಗಳು, ಲಘುಪೋಷಕಾಂಶಗಳು, ಸಣ್ಣ ಸಲಕರಣೆಗಳು ಇತ್ಯಾದಿ) ಬೇಡಿಕೆಗಳನ್ನು ಕ್ರೋಢೀಕರಿಸಿ, ಪರಿಕರಗಳನ್ನು ಒಟ್ಟಾಗಿ ಖರೀಧಿಸುವ ಮುಖಾಂತರ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಪರಿಕರಗಳನ್ನು ರೈತರಿಗೆ ಒದಗಿಸುವುದು
6. ಉತ್ಪನ್ನಗಳನ್ನು ಕ್ರೋಢೀಕರಿಸಿ ಅವುಗಳ ವ್ಯಾಪಾರದಲ್ಲಿ ರೈತರ ಚೌಕಾಸಿ ಸಾಮರ್ಥ್ಯವನ್ನು ಹೆಚ್ಚಿಸುವ ಮುಖಾಂತರ ಹೆಚ್ಚಿನ ಬೆಲೆಯನ್ನು ಕಂಡುಕೊಳ್ಳುವುದು
7. ಅವಶ್ಯಕ ಮೂಲಭೂತ ಸೌಕರ್ಯಗಳಾದ ಸಂಸ್ಕರಣಾ ಹಾಗೂ ಸಂಗ್ರಹಣಾ ಘಟಕಗಳನ್ನು ಸ್ಥಾಪಿಸಿ ಅವುಗಳ ಸೌಲಭ್ಯವನ್ನು ಒದಗಿಸುವುದು
8. ವಿವಿಧ ಇಲಾಖೆಗಳ ಅಡಿಯಲ್ಲಿ ಲಭ್ಯವಿರುವ ಯೋಜನೆಗಳ ಮಾಹಿತಿ ಹಾಗೂ ದೊರೆಯುವ ಅನುಕೂಲಗಳನ್ನು ಒದಗಿಸುವುದು

## ಬಂಜಾರಾ ರೈತ ಉತ್ಪಾದಕರ ಸಂಸ್ಥೆಗಳ ರಚನೆಯ ಹಂತಗಳು

- ಬಂಜಾರಾ ರೈತ ಉತ್ಪಾದಕರ ಸಂಸ್ಥೆಯನ್ನು ರಚಿಸಲು ಆ ಪ್ರದೇಶದ ಪ್ರಮುಖ ಉತ್ಪನ್ನಗಳ ಆಧಾರದ ಮೇಲೆ ನಿರ್ದಿಷ್ಟ ತಾಂಡಾಗಳ ಸಮೂಹವನ್ನು ಗುರುತಿಸುವುದು
- ಪ್ರಮುಖ ಉತ್ಪನ್ನಗಳ ಮೌಲ್ಯ ಸರಪಳಿಗಳನ್ನು ವಿಶ್ಲೇಶಿಸುವುದು
- ರೈತ ಉತ್ಪಾದಕರ ಸಂಸ್ಥೆಗಳ ಬಗ್ಗೆ ಅರಿವು ಮೂಡಿಸುವುದು
- ತಾಂಡಾ ಮಟ್ಟದಲ್ಲಿ 15 ರಿಂದ 20 ರೈತರನ್ನೊಳಗೊಂಡ ರೈತ ಆಸಕ್ತ ಗುಂಪುಗಳನ್ನು ರಚಿಸುವುದು
- ರೈತ ಆಸಕ್ತ ಗುಂಪುಗಳ ಪ್ರತಿನಿಧಿಗಳನ್ನು ಗುರುತಿಸುವುದು
- ಆಸಕ್ತ ರೈತರಿಂದ ರೂ. 1500 ಷೇರು ಬಂಡವಾಳದ ಸಂಗ್ರಹಣೆ
- ರೈತ ಆಸಕ್ತ ಗುಂಪಿನ ಪ್ರತಿನಿಧಿಗಳಿಂದ, 5 ರಿಂದ 15 ಸದಸ್ಯರನ್ನೊಳಗೊಂಡ ಆಡಳಿತ ಮಂಡಳಿಯನ್ನು ರಚಿಸುವುದು ಮತ್ತು ಇವರಲ್ಲಿ ಒಬ್ಬರನ್ನು ಆಡಳಿತ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸುವುದು
- ರೈತ ಉತ್ಪಾದಕರ ಸಂಸ್ಥೆಯನ್ನು ನೊಂದಾಯಿಸುವುದು
- ಸಂಸ್ಥೆಗೆ ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಇತರೆ ಸಿಬ್ಬಂದಿಗಳ ನೇಮಕಾತಿ ಮಾಡುವುದು
- ರೈತರ ಸಹಭಾಗಿತ್ವದಲ್ಲಿ ವ್ಯವಹಾರ ಅವಕಾಶಗಳನ್ನು ಗುರುತಿಸಿ, ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು

## ಬಂಜಾರಾ ರೈತ ಉತ್ಪಾದಕರ ಸಂಸ್ಥೆಯಿಂದ ಸಿಗುವ ಲಾಭಗಳು

- ತಾಂತ್ರಿಕ ಮಾಹಿತಿ ಮತ್ತು ಆಧುನಿಕ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲು ಮಾರ್ಗದರ್ಶನ
- ಅವಶ್ಯವಿರುವ ಪರಿಕರಗಳನ್ನು ಸರಿಯಾದ ವೇಳೆಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಪಡೆಯುವುದು
- ಉತ್ಪನ್ನಗಳನ್ನು ಕ್ರೋಢೀಕರಿಸಿ, ಮೌಲ್ಯವರ್ಧನೆ ಮಾಡಿ ಮಧ್ಯವರ್ತಿಗಳನ್ನು ತಪ್ಪಿಸಿ, ಲಾಭದಾಯಕ ಬೆಲೆಗೆ ನೇರ ಮಾರಾಟ ಮಾಡುವುದು
- ರೈತ ಉತ್ಪಾದಕರ ಕಂಪನಿಯೊಂದಿಗೆ ವ್ಯವಹರಿಸಿದ ಮೊತ್ತಕ್ಕೆ ಅನುಗುಣವಾಗಿ, ವಾರ್ಷಿಕ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರೋತ್ಸಾಹಕ ಮತ್ತು ಸಾಮಾನ್ಯ ಲಾಭಾಂಶವನ್ನು ಷೇರುದಾರರಿಗೆ ನೀಡುವುದು
- ವಿವಿಧ ಇಲಾಖೆಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ರೈತ ಉತ್ಪಾದಕರ ಕಂಪನಿಯ ಮುಖಾಂತರ ಪಡೆಯಲು ಹೆಚ್ಚಿನ ಅವಕಾಶ
- ಸಕಾಲದಲ್ಲಿ ಸಣ್ಣ ಮತ್ತು ಅತೀಸಣ್ಣ ರೈತರಿಗೆ ಅಗತ್ಯ ಕೃಷಿ ಉಪಕರಣಗಳ ಸೇವೆ
- ವಿವಿಧ ಸಂಸ್ಥೆಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆಂದೇ ಲಭ್ಯವಿರುವ ಆರ್ಥಿಕ ನೆರವನ್ನು ಪಡೆದು ಮೂಲಭೂತ ಸೌಕರ್ಯಗಳನ್ನು ರಚಿಸಿ ಅವುಗಳ ಸೇವೆಗಳನ್ನು ಒದಗಿಸುವುದು



## ರೈತ ಉತ್ಪಾದಕರ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಸಂಸ್ಥೆಗಳು

ರೈತ ಉತ್ಪಾದಕರ ಸಂಸ್ಥೆಗಳ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ, ಅವುಗಳಲ್ಲಿ ಮುಖ್ಯವಾಗಿ ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಜಲಾನಯನ ಅಭಿವೃದ್ಧಿ ಇಲಾಖೆ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಸಣ್ಣ ರೈತರ ಕೃಷಿ ವ್ಯವಹಾರ ಒಕ್ಕೂಟ (ಎಸ್.ಎಫ್.ಎ.ಸಿ.), ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಕಾರ್ಪೋರೇಶನ್ (ಎನ್.ಸಿ.ಡಿ.ಸಿ.), ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪ್ಯಾಕ್). ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ಅಪೆಡಾ), ಆಹಾರ ಸಂಸ್ಕರಣ ಕೈಗಾರಿಕೆಗಳ ಸಚಿವಾಲಯ, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಪಶುಸಂಗೋಪನೆ ಇಲಾಖೆ, ರೇಷ್ಮೆ ಇಲಾಖೆ, ತೆಂಗು ಅಭಿವೃದ್ಧಿ ಮಂಡಳಿ, ನಬಾರ್ಡ್/ ನ್ಯಾಬ್‌ಕಿಸಾನ್, ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯಗಳು, ಕೃಷಿ ವಿಜ್ಞಾನ ಕೇಂದ್ರಗಳು (ಕೆ.ವಿ.ಕೆ), ಬ್ಯಾಂಕೇತರ ಹಾಗೂ ಇತರೆ ಸಂಘ ಸಂಸ್ಥೆಗಳು.




ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಸಂಸ್ಥೆಗಳ ಸಾಂಕೇತಿಕ ಚಿತ್ರಣ

## ಬಂಜಾರಾ ರೈತ ಉತ್ಪಾದಕರ ಸಂಸ್ಥೆಗಳ ರಚನೆ, ಆಡಳಿತ ಮತ್ತು ನಿರ್ವಹಣೆಯ ಪಕ್ಷಿನೋಟ

| ಸದಸ್ಯರು | ಬಂಜಾರಾ ತಾಂಡಾಗಳ ರೈತರು (ಪ್ರಾಥಮಿಕ ಉತ್ಪಾದಕರು) |
|---|---|
| ಒಟ್ಟು ಗ್ರಾಮಗಳು / ತಾಂಡಾಗಳು | 5 ರಿಂದ 10 ತಾಂಡಾಗಳು |
| ಒಟ್ಟು ಸದಸ್ಯರು / ಷೇರುದಾರರು | 500 ರಿಂದ 1,000 ಸದಸ್ಯರು |
| ಒಟ್ಟು ರೈತ ಆಸಕ್ತ ಗುಂಪುಗಳು | 25 ರಿಂದ 50 ಗುಂಪುಗಳು (ಪ್ರತಿ ಗುಂಪಿನಲ್ಲಿ 20 ರೈತರು) |
| ರೈತ ಆಸಕ್ತ ಗುಂಪುಗಳ ಪ್ರತಿನಿಧಿಗಳು | ಪ್ರತಿ ಗುಂಪಿನಿಂದ ಇಬ್ಬರು |
| ಷೇರು ಮೊತ್ತ | ಪ್ರತಿ ಸದಸ್ಯರಿಗೆ 1,500/– ರೂ |
| ಆಡಳಿತ ಮಂಡಳಿ | 5 ರಿಂದ 15 ನಿರ್ದೇಶಕರು (ರೈತ ಆಸಕ್ತ ಗುಂಪಿನ ಸದಸ್ಯರಿಂದ ಆಯ್ಕೆ ಮಾಡುವುದು) |
| ನೊಂದಣಿ | ಕಂಪನಿ ಕಾಯ್ದೆ 1956 ರ (ವಿಭಾಗ IX A) ಅಡಿಯಲ್ಲಿ ಅಥವಾ ಕರ್ನಾಟಕ ಸಹಕಾರಿ ಕಾಯ್ದೆ 1959 ರ ಅಡಿಯಲ್ಲಿ ನೊಂದಾಯಿಸಲಾಗುತ್ತದೆ |
| ವಾರ್ಷಿಕ ಸಾಮಾನ್ಯ ಸಭೆಗಳು | ಮೊದಲನೆಯ ವಾರ್ಷಿಕ ಸಾಮಾನ್ಯ ಸಭೆ ನೊಂದಣಿಯಾದ 90 ದಿನಗಳ ಒಳಗೆ ಮತ್ತು ನಂತರ ಪ್ರತಿ ವರ್ಷದ ಸೆಪ್ಟೆಂಬರ್ 30 ರೊಳಗೆ |
| ಸದಸ್ಯರ ಮತದಾನದ ಹಕ್ಕು | ಒಬ್ಬ ಸದಸ್ಯರಿಗೆ ಒಂದು ಮತ |
| ಲಾಭಾಂಶ ಹಂಚಿಕೆ | ಷೇರುದಾರರಿಗೆ ಪ್ರೋತ್ಸಾಹಕ ಮತ್ತು ಸಾಮಾನ್ಯ ಲಾಭಾಂಶ |
| ಆಡಳಿತ ಮಂಡಳಿ ಸಭೆಗಳು | ಕನಿಷ್ಟ ಪ್ರತಿ ತ್ರೈಮಾಸಿಕಕ್ಕೆ ಒಂದು |
| ಆಡಳಿತ ಮಂಡಳಿಯ ನಿರ್ದೇಶಕರ ಅವಧಿ | 1 ರಿಂದ 5 ವರ್ಷಗಳು (ಮರು ನೇಮಕಾತಿಗೆ ಅವಕಾಶವಿದೆ) |
| ಸಿಬ್ಬಂದಿ | ಮುಖ್ಯಕಾರ್ಯನಿರ್ವಹಣಾಧಿಕಾರಿ (ಸಿ.ಇ.ಓ.), ಲೆಕ್ಕಾಧಿಕಾರಿ ಹಾಗೂ ಅವಶ್ಯಕತೆಗಳಿಗನುಗುಣವಾಗಿ ಇತರೆ ಸಿಬ್ಬಂದಿ |
| ಉಪಸಮಿತಿಗಳು | ಜವಾಬ್ದಾರಿ ಹಂಚಿಕೆಗಾಗಿ ಮತ್ತು ಉತ್ತಮ ನಿರ್ವಹಣೆಗಾಗಿ ಹಣಕಾಸು, ಪರಿಕರಗಳ ಬೇಡಿಕೆ ಮತ್ತು ಖರೀದಿಗಳ ವ್ಯವಹಾರಕ್ಕೆ ವಿವಿಧ ಉಪಸಮಿತಿಗಳನ್ನು ರಚಿಸಿಕೊಳ್ಳುವುದು |

## ವಿವಿಧ ಪ್ರೋತ್ಸಾಹಕ ಸಂಸ್ಥೆಗಳಿಂದ ಬಂಜಾರಾ ರೈತ ಉತ್ಪಾದಕರ ಸಂಸ್ಥೆಗಳು ಪಡೆಯಬಹುದಾದ ಸೌಲಭ್ಯಗಳು

- ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಲು ಸಂಪನ್ಮೂಲ ಸಂಸ್ಥೆಗಳನ್ನು ಗುರುತಿಸಿ ಅಗತ್ಯವಿರುವ ನೆರವನ್ನು ನೀಡಲಾಗುತ್ತದೆ
- ರೈತರಲ್ಲಿ ಅರಿವು ಮೂಡಿಸಲು ಹಾಗೂ ಸಾಮರ್ಥ್ಯ ಬಲವರ್ಧನೆಗೆ ನೆರವು
- ರೈತ ಉತ್ಪಾದಕರ ಕಂಪನಿಗಳ ವ್ಯವಹಾರದ ಪ್ರಾರಂಭದಲ್ಲಿ ವ್ಯವಹಾರ ಬಂಡವಾಳದ ನೆರವು
- ರೈತ ಉತ್ಪಾದಕರ ಸಂಸ್ಥೆಗಳ ಕಾರ್ಯವೈಖರಿ ಮತ್ತು ವ್ಯವಹಾರ ಯೋಜನೆಯ ಆಧಾರದ ಮೇಲೆ ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯ
- ಎಸ್.ಎಫ್.ಎ.ಸಿ. ವತಿಯಿಂದ ಷೇರು ಮೊತ್ತಕ್ಕೆ ಅನುಗುಣವಾಗಿ ಹೊಂದಾಣಿಕೆ ಅನುದಾನ (ಇಕ್ವಿಟಿ ಗ್ರಾಂಟ್)
- ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಉಗ್ರಾಣ, ಸಂಸ್ಕರಣಾ ಘಟಕ ಹಾಗೂ ಇತರೆ ಸೌಕರ್ಯಗಳನ್ನು ರಚಿಸಿಕೊಳ್ಳಲು ಧನ ಸಹಾಯ
- ರಿಯಾಯತಿ ದರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಿ ಅವುಗಳ ಸೇವೆಯನ್ನು ಒದಗಿಸಲು ನೆರವು
- ಉತ್ಪನ್ನಗಳಿಗೆ ಮಾರುಕಟ್ಟೆಗಳನ್ನು ಗುರುತಿಸಿ ಖರೀದಿದಾರರೊಂದಿಗೆ ಸಂಪರ್ಕ ಕಲ್ಪಿಸಲು ಸಹಾಯ
- ರೈತ ಉತ್ಪಾದಕರ ಸಂಸ್ಥೆಗಳ ಒಟ್ಟಾರೆ ಅಭಿವೃದ್ಧಿಗಾಗಿ ಬೆಂಬಲ ನೀಡಲು ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ರಾಜ್ಯದ ರೈತ ಉತ್ಪಾದಕರ ಸಂಸ್ಥೆಗಳಿಗೆ ಮಾರ್ಗದರ್ಶನ, ಸಾಮರ್ಥ್ಯ ಬಲವರ್ಧನೆ, ತಾಂತ್ರಿಕ ಮಾಹಿತಿ ಹಾಗೂ ವ್ಯವಹಾರ ಅಭಿವೃದ್ಧಿಗೆ ನೆರವು ನೀಡಲಾಗುತ್ತದೆ

## ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ

ಕರ್ನಾಟಕ ಸರಕಾರ ತನ್ನ ಆದೇಶ ಸಂಖ್ಯೆ. ಎಸ್.ಡಿ.ಡಿ: 35 ಎಸ್ಡಿಸಿ:07, 31.08.2007 ರ ನಿಬಂಧನೆಗಳಡಿಯಲ್ಲಿ, ಕರ್ನಾಟಕ ತಾಂಡಾಗಳ ಅಭಿವೃದ್ಧಿಗೆ ಹೊಸ ನಿಗಮವನ್ನು ಸ್ಥಾಪಿಸಲು ಆದೇಶಿಸಲಾಯಿತು. ಅದರಂತೆ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತವನ್ನು 23.06.2009 ರಲ್ಲಿ ಕಂಪನಿಗಳ ಕಾಯ್ದೆ 1956 ರ ಅಡಿಯಲ್ಲಿ ರಚಿಸಲ್ಪಟ್ಟಿತು.

ಈ ನಿಗಮವು ಕರ್ನಾಟಕ ಸರ್ಕಾರದಿಂದ ಸಂಪೂರ್ಣವಾಗಿ ಸ್ವಾಮ್ಯ ಹೊಂದಿದೆ. ಈ ಸಂಸ್ಥೆಯ ನೋಂದಾಯಿತ ಮತ್ತು ಸಾಂಸ್ಥಿಕ ಕಚೇರಿ ಬೆಂಗಳೂರಿನಲ್ಲಿದೆ. ಈ ನಿಗಮವು ಕರ್ನಾಟಕ ಸರಕಾರದ ಸಾಮಾಜಿಕ ಕಲ್ಯಾಣ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲಿದೆ. ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ದೂರದೃಷ್ಟಿಯು ತಾಂಡಾಗಳ ಸಂಪರ್ಕಕ್ಕಾಗಿ ಉತ್ತಮ ರಸ್ತೆಗಳ ವ್ಯವಸ್ಥೆ, ಒಳಚರಂಡಿ, ವಸತಿ ಮತ್ತು ಸಾರಿಗೆ, ಸಮುದಾಯ ಕೇಂದ್ರಗಳು, ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು. ಕುಡಿಯುವ ನೀರು, ವಿದ್ಯುತ್, ರಸ್ತೆ ದೀಪಗಳು ಮುಂತಾದ ನಾಗರಿಕ ಸೌಕರ್ಯಗಳನ್ನು ತಾಂಡಾಗಳಿಗೆ ಒದಗಿಸುವುದು.

ನಿಗಮವು ಮಾದರಿ ಶಾಲೆಗಳಾದ ಮೊರಾರ್ಜಿ ದೇಸಾಯಿ/ನವೋದಯ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಆಶ್ರಮ ಶಾಲೆಗಳ ಸಾಲಿನಲ್ಲಿ ಅರೆಕಾಲಿಕ ವಸತಿ ನಿಲಯಗಳು ಮತ್ತು ವಸತಿ ಶಾಲೆಗಳನ್ನು ಸ್ಥಾಪಿಸುವ ಮೂಲಕ ತಾಂಡಾ ನಿವಾಸಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಇದರ ಮುಖ್ಯ ಗುರಿಗಳು.

ನಿಗಮವು ಸಮುದಾಯದ ಅಭಿವೃದ್ಧಿಗಾಗಿ ಸಾಮಾಜಿಕ ಅರಿವು ಮೂಡಿಸಲು ಮತ್ತು ತಾಂಡಾಗಳಲ್ಲಿ ವಾಸಿಸುವ ಜನರ ನೈತಿಕತೆಯನ್ನು ಹೆಚ್ಚಿಸಲು ಮತ್ತು ಕಾಪಾಡಲು, ಬಂಜಾರಾವನ್ನು ಸಂರಕ್ಷಿಸಲು ಸಾಮಾಜಿಕ ವ್ಯವಹಾರಗಳನ್ನು ನಡೆಸಲು ಸಾಮಾಜಿಕ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರುವುದು ನಿಗಮದ ಉದ್ದೇಶಗಳಾಗಿವೆ. ಮುಂದುವರೆದು ಕರ್ನಾಟಕ ರಾಜ್ಯ ತಾಂಡಾ ಅಭಿವೃದ್ಧಿ ನಿಗಮವು ಬಂಜಾರಾ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿ ಬಲಪಡಿಸುವ ಯೋಜನೆಯನ್ನು ರೂಪಿಸಿದೆ. ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಅಭಿವೃದ್ಧಿಗೆ ಅಗತ್ಯ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡುತ್ತಿದೆ.

## ಜ್ಞಾನ ಸಹಯೋಗ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

ರಾಜ್ಯದಲ್ಲಿ ಕೃಷಿ ಹಾಗೂ ಕೃಷಿ ಅವಲಂಬಿತ ಚಟುವಟಿಕೆಗಳ ಅಭಿವೃದ್ಧಿಯನ್ನು ಸಾರ್ವಜನಿಕ ಹಾಗೂ ಖಾಸಗಿ ವಲಯಗಳ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಕರ್ನಾಟಕ ಸರ್ಕಾರವು ರೈತ ಉತ್ಪಾದಕರ ಸಂಸ್ಥೆಗಳನ್ನು ಉತ್ತೇಜನ ಮಾಡುವ ಮೂಲಕ ರಾಜ್ಯದಲ್ಲಿರುವ ಅಭಿವೃದ್ಧಿ ಇಲಾಖೆಗಳು ರೈತರನ್ನು ಒಂದು ಸಾಂಸ್ಥಿಕ ರಚನೆಯ ಅಡಿಯಲ್ಲಿ ತರಲು ಕಾರ್ಯೋನ್ಮುಖವಾಗಿವೆ. ಕರ್ನಾಟಕ ಸರ್ಕಾರವು ರೈತ ಉತ್ಪಾದಕ ಸಂಸ್ಥೆಗಳ ಸಾಮರ್ಥ್ಯ ವರ್ಧನೆ ಹಾಗೂ ಬಲವರ್ಧನೆಗೊಳಿಸುವ ದಿಶೆಯಲ್ಲಿ ಈ ಸಂಸ್ಥೆಗಳಿಗೆ ಆರ್ಥಿಕ ನೆರವು ಹಾಗೂ ಆಡಳಿತಾತ್ಮಕ ಬೆಂಬಲವನ್ನು ನೀಡಲಾಗುತ್ತಿದೆ. ಮುಖ್ಯವಾಗಿ ಸುತ್ತು ನಿಧಿ, ಮೂಲ ಸೌಲಭ್ಯಗಳ ಅಭಿವೃದ್ಧಿಗೆ ಸಹಕಾರ ಹಾಗೂ ಹಲವಾರು ರೀತಿಯ ತಾಂತ್ರಿಕ, ಸಾಂಸ್ಥಿಕ ಸಹಕಾರ ಮತ್ತು ಬೆಂಬಲ ನೀಡುವ ನಿಟ್ಟಿನಲ್ಲಿ ಒಂದು ಸಾಂಸ್ಥಿಕ ರಚನೆಯ ಅವಶ್ಯಕತೆಯನ್ನು ಮನಗಂಡು ರೈತ ಉತ್ಪಾದಕರ ಸಂಸ್ಥೆಗಳ ಒಟ್ಟಾರೆ ಅಭಿವೃದ್ಧಿಗೆ ಬೆಂಬಲ ನೀಡುವುದಕ್ಕಾಗಿ ತೋಟಗಾರಿಕೆ ಇಲಾಖೆ ಹಾಗೂ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯು ರಾಜ್ಯದಲ್ಲಿರುವ ರೈತ ಉತ್ಪಾದಕರ ಸಂಸ್ಥೆಗಳಿಗೆ ಅವಶ್ಯಕವಿರುವ ಮಾರ್ಗದರ್ಶನ, ಸಾಮರ್ಥ್ಯ ಬಲವರ್ಧನೆ, ತಾಂತ್ರಿಕ ಮಾಹಿತಿ, ವ್ಯವಹಾರ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ಬೆಂಬಲ ಮತ್ತು ಸಹಕಾರ ನೀಡುವ ಮೂಲಕ ಈ ಸಂಸ್ಥೆಗಳ ಸದಸ್ಯ ರೈತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಕರ್ನಾಟಕ ರಾಜ್ಯ ತಾಂಡಾ ಅಭಿವೃದ್ಧಿ ನಿಗಮದಿಂದ ಪ್ರಾರಂಭಿಸಲಾಗುವ ಬಂಜಾರಾ ರೈತ ಉತ್ಪಾದಕರ ಸಂಸ್ಥೆಗಳಿಗೂ ಈ ಕೇಂದ್ರವು ಜ್ಞಾನ ಹಂಚಿಕೆಯ ಪಾಲುದಾರ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

**ಹೆಚ್ಚಿನ ಮಾಹಿತಿಗಾಗಿ:**

**ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ**
#19/4, ಸೈರಾಬಾಗ್, 2ನೇ ಮಹಡಿ
ಕನ್ನಿಂಗ್‌ಹ್ಯಾಮ್ ರೋಡ್, ಬೆಂಗಳೂರು – 560 052
ದೂರವಾಣಿ: 080-22285561/62/63/65
ಮಿಂಚಂಚೆ: www.banjarathanda.kar.nic.in
ವೆಬ್‌ಸೈಟ್: ktdclit@gmail.com

**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**
ತೋಟಗಾರಿಕೆ ಮಹಾವಿದ್ಯಾಲಯ, ತೋ.ವಿ.ವಿ. ಆವರಣ
ಜಿ.ಕೆ.ವಿ.ಕೆ. ಅಂಚೆ, ಬೆಂಗಳೂರು – 560 065
ದೂರವಾಣಿ: 080-29721577
ಮಿಂಚಂಚೆ: coefpo@gmail.com
ವೆಬ್‌ಸೈಟ್: www.coefpo.org